**ಪ್ರಮಾಣವಚನ ಬೋಧಿಸಿದ ದಿನಾಂಕ 10.02.2026**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಅರ್ಜಿದಾರರ ಸಾಕ್ಷಿದಾರರು ಹಾಜರಿರುತ್ತಾರೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಅದರಲ್ಲಿ ತಿಳಿಸಿದ ಎಲ್ಲಾ ಅಂಶಗಳು ಸತ್ಯದಿಂದ ಕೂಡಿದ್ದು ನನ್ನ ಹೇಳಿಕೆಯ ಮೇರೆಗೆ ದಾಖಲಿಸಲಾಗಿರುತ್ತದೆ ಎಂದು ಪ್ರಮಾಣಿಕರಿಸಿರುತ್ತಾರೆ ಪಿ.ಡಬ್ಲೂ-2 ಎಂದು ವಿಚಾರಿಸಲಾಯಿತು.

ನಾನು ಹಾಗೂ ಡಾಃ ಕ್ರಾಂತಿ ಕಿರಣ್ ರವರು ರಕ್ಷಾ ಆಸ್ಪತ್ರೆ, ರಾಜಾನುಕುಂಟೆ ನಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದು, ಅರ್ಜಿದಾರರಿಗೆ ಇಬ್ಬರು ಸೇರಿ ಚಿಕಿತ್ಸೆ ಕೊಟ್ಟಿರುತ್ತೇವೆ. ಡಾಃ ಕ್ರಾಂತಿ ಕಿರಣ್ ರವರು ನನಗೆ ನೀಡಿರುವ ಅಧಿಕಾರ ಪತ್ರ ನೀಡಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಗಿದೆ.

ಶಸ್ತ್ರ ಚಿಕಿತ್ಸೆ ಮಾಡಿದ ಬಗ್ಗೆ ಹಣದ ವೆಚ್ಚದ ಎಸ್ಟಿಮೆಟ್‌ಗಳನ್ನು ಒಟ್ಟಾಗಿ ನಿಪಿ-15 ಎಂದು ಗುರುತಿಸಲಾಗಿದೆ. ನಮ್ಮ ಆಸ್ಪತ್ರೆ 2024 ರಲ್ಲಿ ಬೆಂಕಿ ಅತ್ತಿಕೊಂಡಿದ್ದರಿಂದ ದಾಖಲೆಗಳು ಸುಟ್ಟು ಹೋಗಿದ್ದು, ಈ ಸಂಬಂಧ ಪೋಲಿಸರಿಗೆ ದೂರು ನೀಡಿದ್ದು, ಸದರಿ ದೂರಿನ ದೃಡೀಕೃತ ನಕಲು ನಿಪಿ-16 ಎಂದು, ಪೋಲಿಸ್ ಹಿಂಬರಹ ನಿಪಿ-17 ಎಂದು, ಸ್ಥಳ ಮಹಜರ್ ನಿಪಿ-18 ಎಂದು, ಎಕ್ಸರೇ ಫೀಲಂ ನಿಪಿ-19 ಎಂದು, ಎಕ್ಸರೇ ರೀಪೋರ್ಟ್ ನಿಪಿ-20 ಎಂದು, ಅಂಗನೂನ್ಯತೆ ನಿರ್ಧರಣಾ ಪಟ್ಟಿ ನಿಪಿ-21 ಎಂದು, ಬೆಂಕಿ ಅತ್ತಿಕೊಂಡು ದಾಖಲೆಗಳು ಸುಟ್ಟು ಹೋದ ಬಗ್ಗೆ ಸದರಿ ನೀಡಿರುವ ಖಾಗದ ನಿಪಿ-22 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು 3ನೇ ಎದುರುದಾರರು ಪರ ವಕೀಲರಿಂದಃ**

ಡಾಃ ಕ್ರಾಂತಿ ಕಿರಣ್ ರವರು ನಮ್ಮ ಆಸ್ಪತ್ರೆಯ ಎಂ.ಡಿ ಆಗಿದ್ದಾರೆ. ಮಾರ್ಚ್ 2024ನೇ ಇಸವಿಯಲ್ಲಿ ಸದರಿ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಕೊಂಡೆ ನಮ್ಮ ಆಸ್ಪತ್ರೆಯಲ್ಲಿ ಬಿ.ಪಿ.ಎಲ್ ಕಾರ್ಡ್ ವ್ಯವಸ್ಥೆ ಇಲ್ಲ. ಆರೋಗ್ಯ ವಿಮೆ ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿ

ವ್ಯವಸ್ಥೆ ಇದೆ. ಸದರಿ ಅಜಿರ್ದಾರ ಈ ಸೌಲಭ್ಯಗಳನ್ನು ಪಡೆದಿದ್ದನೊ ಇಲ್ಲವೋ ಎಂದು ಗೊತ್ತಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಡಿಸಚಾರ್ಜ್ ಸಮ್ಮರಿ ಮಾತ್ರ ಲಭ್ಯ ಇದ್ದು ಕೇಸ್ ಶಿಟ್ ಬೆಂಕಿಯಿಂದ ಹಾಳಾಗಿರುತ್ತವೆ. ನಮ್ಮಲ್ಲಿ ಬೆಂಕಿ ಹೊ ಹತ್ತಿಕೊಳ್ಳುವ ಮುಂಚೆಯೊ ಬಿಲ್ಲುಗಳು ಕಂಪ್ಯೂಟರ್ ಬಿಲ್ ಆಗಿದ್ದವು. ಡಾಃ ಕ್ರಾಂತಿ ಕಿರಣ್ರವರು ಅಜಿರ್ದಾರರಿಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ ಎಂದರೆ ಅವರ ಟಿಮ ನಲಿಲ್ಲ ನಾನು ಇದ್ದೆ. ಡಿಸ್ಚಾರ್ಜ ಸಮರಿಯಲ್ಲಿ ಯಾವಯಾವ ವೈದ್ಯರು ಸೇರಿ ಶಸ್ತ್ರಚಿಕಿತ್ತೆ ಮಾಡಿರುತ್ತಾರೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಿಪಿ-12 ರಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ಸರಿ. ಹೀಗಾಗಿ ಅಜಿರ್ದಾರರಿಗೆ ನಾನಾ ಶಸ್ತ್ರಚಿಕಿತ್ತೆ ಮಾಡಿಲ್ಲ ಎಂದರೆ ಸರಿಯಲ್ಲ.

ನಾವು ಶಸ್ತ್ರಚಿಕಿತ್ಸೆ ಮಾಡುವ ಮೊದಲು ಅರ್ಜಿದಾರಳು ಸಿಜರಿಯನ್ನು ಆಗಿದ್ದು ಎಂದರೆ ಸರಿ . ಈ ಬಗ್ಗೆ ಗಾಯಾಳುವಿಗೆ ವಿಚಾರ ಮಾಡಿರುವುದಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಅಜಿರ್ದಾರ ಫಿಜಿಯೊಥೆರಪಿ ಮಾಡಿಸಿಕೊಂಡಿದ್ದಾರೆ. 3 ತಿಂಗಳಿಗೊಮ್ಮೆ ಮಾಡಿಸಿಕೊಳ್ಳುತ್ತಾರೆ. ಈ ಸಂಬಂಧ ದಾಖಲೆಯನ್ನು ನಮ್ಮ ಆಸ್ಪತ್ರೆಯಲ್ಲಿ ಇಟ್ಟಿರುವುದಿಲ್ಲ. ಮುಂದುವರೆದ ಚಿಕಿತ್ಸೆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಆಸ್ಪತ್ರೆಯಿಂದ ಅರ್ಜಿದಾರ ಬಿಡುಗಡೆ ಆದ ನಂತರ ಪುನಃ ಮುಂದುವರೆದ ಚಿಕಿತ್ಸೆಗೆ ನಮ್ಮ ಆಸ್ಪತ್ರೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಮುಂದುವರೆದ ಚಿಕಿತ್ಸೆ ನಾವು ಕೊಡದೆ ಇರುವುದರಿಂದ ಸಂಬಂದಪಟ್ಟ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿಪಿ 13 ರನ್ನು ಯಾರು ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಅರ್ಜಿದಾರ ಮೌಖಿಕವಾಗಿ ಕೋರಿಕೆಯ ಮೇರೆಗೆ ಪ್ರಮಾಣಪತ್ರ ಕೊಡುತ್ತೇವೆ. ಅರ್ಜಿದಾರರಿಗೆ 4 ತಿಂಗಳು ವಿಶ್ರಾಂತಿ ಹೇಳಿದ್ದೆವು.

ನಾನು ಹಾಗೂ ಕ್ರಾಂತಿ ಕಿರಣ್ ಇಬ್ಬರು ಸೇರಿ ಅಂಗನ್ಯೂನತೆ ನಿರ್ಧರಣೆ ಮಾಡಿರುತ್ತೇವೆ. ಅರ್ಜಿದಾರಳು ಆಸ್ಪತ್ರೆಯಿಂದ ಬಿಡುಗಡೆ ಆದ 2 ವರ್ಷ ನಂತರ ಅಂಗನ್ಯೂನತೆ ನಿರ್ಧರಣೆ ಮಾಡಿರುತ್ತೇನೆ ಎಂದರೆ ಸರಿ. ಅಂಗನ್ಯೂನತೆ ನಿರ್ಧರಣೆ ಮಾಡುವ ವೇಳೆ ಎಕ್ಸರೆ ತೆಗೆಯಲಾಗಿದೆ. ಅದರ ಪ್ರಕಾರ ಮೂಳೆನೂರಿತ ಸಂಪೂರ್ಣ ಕೂಡಿಕೊಂಡಿದೆ ಎಂದರೆ ಸರಿಯಲ್ಲ. ಕಾಲಿನಲ್ಲಿ ಇಂಪ್ಲಾಟ್ ಹಾಕಲಾಗಿದೆ. ಫಿಬೂಲಾ ಮೂಳೆ ಕೂಡಿಕೊಂಡಿದೆ ಆದರೆ ತುದಿಯ ಫಿಬೂಲಾ ಮೂಳೆ ಕೂಡಿಲ್ಲ. ಪ್ರತಿ ಮುಂದುವರಿದ ಚಿಕಿತ್ಸೆ ವೇಳೆ ಎಕ್ಸರೆ ಮಾಡಿಸುತಿದ್ದೆವು. ಗಾಯ ಆಗಿ 12 ರಿಂದ 14 ತಿಂಗಳ ನಂತರ ಮೂಳೆ ಕೂಡಿಕೊಂಡಿದೆಯೋ ಇಲ್ಲವೋ ಎಂದು ನಿರ್ಧಾರ ಮಾಡಬಹುದು. ಈಗ ಹೊಸದಾಗಿ ಮೂಳೆ ಬೆಳೆಯುವ ಹಂತದಲ್ಲಿದೆ. ಆದ್ದರಿಂದ ಅಂಗನ್ಯೂನತೆಯನ್ನು ಈಗಲೇ ನಿರ್ಧರಣೆ ಮಾಡಲು ಬರುವುದಿಲ್ಲ ಎಂದರೆ ಸರಿ . ಅಂಗನ್ಯೂನತೆ ಪ್ರಮಾಣ ಹೆಚ್ಚಾಗಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಇಂಪ್ಲಾಟ್ಗಳು ಇನ್ನು ತೆಗೆದಿಲ್ಲ ಹೀಗಾಗಿ ಚಲನವಲನೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಅಜಿರ್ದಾರಳು ಸರಿಯಾಗಿ ಕಾಲಕಾಲಕ್ಕೆ ಮುಂದುವರೆದ ಚಿಕಿತ್ಸೆ ಸರಿಯಾಗಿ ಪಡೆದುಕೊಳ್ಳದೆ ಇದ್ದಾಗ ಗಾಯ ವಾಸಿಯಾಗಲು ಹೆಚ್ಚು ದಿನಗಳು ಬೇಕಾಗುತ್ತದೆ ಎಂದರೆ ಸರಿ. ಆದ್ದರಿಂದ ನಾನು ಅಂಗನ್ಯೂನತೆ ನಿರ್ಧರಣೆ ಮಾಡಿರುವುದು ಪ್ರಿಮಾಚ್ಯೂರ್ ಆಗಿದೆ ಎಂದರೆ ಸರಿಯಲ್ಲ. ಅರ್ಜಿದಾರಳು ಎಸ್ಟಿಮೇಶನ್ ವೆಚ್ಚವನ್ನು

ಸರ್ಕಾರಿ ಆಸ್ಪತ್ರೆಯಲ್ಲಿ ಪಡೆಯಬಹುದು ಎಂದರೆ ನಮ್ಮ ಆಸ್ಪತ್ರೆಯಲ್ಲಿ ಬಿ.ಪಿ.ಎಲ್ ಸೌಲಭ್ಯ ಇರುವುದಿಲ್ಲ ಎಂದರೆ ಸರಿ . ಅಜಿರ್ದಾರಳಿಗೆ ಸಹಾಯ ಮಾಡಿಕೊಡಲು ಹೆಚ್ಚಿನ ಪ್ರಮಣದ ಅಂಗನ್ಯೂನತೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ನಮ್ಮಲ್ಲಿ ಮುಂದುವರೆದ ಚಿಕಿತ್ಸೆ ಪಡೆದಿಲ್ಲ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**( 1ನೇ ಎದುರುದಾರ ಪರ ವಕೀಲರು ಗೈರುಹಾಜರಾಗಿದ್ದು ವಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ )**

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.